# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 183/15-16

ದಿನಾಂಕ : 25 -10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

**ಮೇಲ್ಮನವಿದಾರರು**

1. ಶ್ರೀ ಅಣ್ಣು ನಲ್ಕೆ
   ಬಿನ್ ಕೊರಗ ನಲ್ಕೆ
2. ಶ್ರೀ ಪೆರ್ಣ ನಲ್ಕೆ,
   ಬಿನ್ ಕೊರಗ ನಲ್ಕೆ
3. ಶ್ರೀಮತಿ ರೋಹಿಣಿ ಕೋಂ ದಿ| ಶೀನಾ
4. ಶ್ರೀ ಭರತ್ ಬಿನ್ ದಿ| ಶೀನಾ,
5. ಯಶ್ವಿತ್ ಬಿನ್ ದಿ| ಶೀನಾ
6. ಎಲ್ಲರೂ ಪಾರೆಂಕಿ ಕೊಡಿಮನೆ,
   ಮಿತ್ತಬಾಗಿಲು ಗ್ರಾಮ ಮತ್ತು ಅಂಚೆ,
   ಬೆಳ್ತಂಗಡಿ ತಾಲೂಕು ದ.ಕ.

(ನ್ಯಾಯವಾದಿ ಶ್ರೀ ಶಿವಯ್ಯ ಎಸ್.ಎಲ್)

- ಮತ್ತು -

**ಪ್ರತಿವಾದಿಯವರು**

1. ತಹಶೀಲ್ದಾರರು
   ಬೆಳ್ತಂಗಡಿ ತಾಲೂಕು ದ.ಕ.
2. ಬಿ.ಕೆ. ರಾಜಶೇಖರ್ ರಾವ್
   ಬಿನ್ ಬಿ.ಕೆ. ಗಂಗಾಧರ್ ರಾವ್,
   ಕೊಮಿಡ್ಕ ಮನೆ, ಮಿತ್ತಬಾಗಿಲು ಗ್ರಾಮ,
   ಬೆಳ್ತಂಗಡಿ ತಾಲೂಕು ದ.ಕ.

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ MR: 274/80-81 ರಂತೆ ತಹಶೀಲ್ದಾರರು ನೀಡಿದ ಹಿಂಬರಹ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಸ.ನಂ. 75/15ಎ ರ ಪೈಕಿ ವಿಸ್ತೀರ್ಣ 0.93 ಎಕ್ರೆ ಜಮೀನು ಭೂ ನ್ಯಾಯ ಮಂಡಳಿಯ LRY ನಂ. 9/74-75ದಿನಾಂಕ: 26-03-1979 ರಂತೆ ಮೇಲ್ಮನವಿದಾರರ ಅರ್ಜಿ ಮಂಜೂರಾಗಿರುತ್ತದೆ. ಅದರಂತೆ ದಿನಾಂಕ: 05-01-1981 ರಂದು Form – 10 ನೀಡಿರುತ್ತಾರೆ. ಆದರೆ ಮ್ಯುಟೇಶನ್ ಅಂಗೀಕರಿಸುವಾಗ ಸ.ನಂ. 75/15A ಪೈಕಿ 0.93 ಎಕ್ರೆಯನ್ನು 0.03 ಎಕ್ರೆ ಎಂದು ದಾಖಲಿಸಿ ಮ್ಯುಟೇಶನ್ ಅಂಗೀಕರಿಸಿರುತ್ತಾರೆ. ಉಳಿದೆಲ್ಲ ಸ.ನಂ. ವಿಸ್ತೀರ್ಣಗಳು ಸರಿ ಇರುತ್ತದೆ. ಸದ್ರಿ ಪಕೀರ ನಲ್ಕೆ ಯವರು ಮೃತರಾಗಿರುತ್ತಾರೆ. ಅವರ ಮಗ ಕೊರಗ ನಲ್ಕೆ ಮತ್ತು ಕೊರಗ ನಲ್ಕೆ ಪತ್ನಿ ಕೂಡಾ ಮೃತರು. ಅವರ ವಾರೀಸುದಾರರಾದ ಮೇಲ್ಮನವಿದಾರರ ಹೆಸರಲ್ಲಿ ಖಾತೆ ದಾಖಲಾಗಿರುತ್ತದೆ. ಈ ಜಮೀನುಗಳನ್ನು ಮೇಲ್ಮನವಿದಾರರೆಲ್ಲರೂ ಸ್ವಾಧೀನ ಹೊಂದಿ ಜಂಟಿಯಾಗಿ ಅನುಭವಿಸಿಕೊಂಡು ಬರುತ್ತಾರೆ. ಸ.ನಂ. 75/15ಎ ರ ಪೈಕಿ 0.93 ಎಕ್ರೆ ಬದಲಿಗೆ 0.03 ಎಕ್ರೆ ಎಂದು ದಾಖಲಿಸಿರುವುದನ್ನು ಸರಿಪಡಿಸಲು

ತಹಶೀಲ್ದಾರರಲ್ಲಿ ಕೋರಿದಾಗ ತಮ್ಮ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ತಿಳಿಸಿದಂತೆ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 23-02-2016 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ: 14-06-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ 2 ಪ್ರತಿವಾದಿಯವರು ಹಾಜರಾಗಿರುತ್ತಾರೆ. ಆದರೆ ಈ ಬಗ್ಗೆ ಯಾವುದೇ ಆಕ್ಷೇಪಣೆ ಸಲ್ಲಿಸಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಪಹಣಿ ದಾಖಲಿಸಲು ಬಿಟ್ಟು ಹೋಗಿರುವ 0.90 ಎಕ್ರೆ ಜಮೀನು ಈಗಲೂ ಮೇಲ್ಮನವಿದಾರರ ಸ್ವಾಧೀನಾನುಭವದಲ್ಲಿ ಇರುತ್ತದೆ. ಆದುದರಿಂದ ಈ ಮೇಲ್ಮನವಿ ಬಗ್ಗೆ ಸೂಕ್ತ ತನಿಖೆ ನಡೆಸಿ, ಮೇಲ್ಮನವಿಯನ್ನು ಪುರಸ್ಕರಿಸಿ MR: 274/80-81 ನ್ನು ರದ್ದುಪಡಿಸಿ, ಸೂಕ್ತ ಮ್ಯುಟೇಶನ್ ಅಂಗೀಕರಿಸಿ 0.03 ಎಕ್ರೆ ಬದಲು 0.93 ಎಕ್ರೆ ಎಂಬುದಾಗಿ ಪಹಣಿ ದಾಖಲಿಸಿ ನ್ಯಾಯ ಒದಗಿಸುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ LRY: 79/74-75 ನೇ ಭೂ ನ್ಯಾಯ ಮಂಡಳಿಯ ಆದೇಶದಲ್ಲಿ ಸ.ನಂ. 75/15ಎ(P1) ವಿಸ್ತೀರ್ಣ 0.93 ಎಕ್ರೆ ಎಂದಿರುತ್ತದೆ. ನಮೂನೆ - 10 ನೀಡುವ ಸಮಯ ಸ.ನಂ. 75/15ಎ(P) ಯಲ್ಲಿ ವಿಸ್ತೀರ್ಣ 0.03 ಎಕ್ರೆ ಎಂದು ಕಂಡು ಬರುತ್ತದೆ. ಸದ್ರಿ ನಮೂನೆ - 10 ರ ಪ್ರಕಾರ ಮ್ಯುಟೇಶನ್ ವಹಿಯಲ್ಲಿ MR: 274/80-81 ನ್ನು ದಾಖಲಿಸುವಾಗ ವಿಸ್ತೀರ್ಣವನ್ನು 0.03 ಎಕ್ರೆ ಎಂದೇ ದಾಖಲಿಸಿರುತ್ತಾರೆ. ಪ್ರಕರಣದಲ್ಲಿ ಫಾರ್ಮ್ - 10 ನ್ನು ಪರಿಷ್ಕರಿಸಬೇಕಾಗಿರುತ್ತದೆ. ಆ ನಂತರವೇ ಪಹಣಿಯನ್ನು ಸರಿಪಡಿಸಿ ದಾಖಲಿಸಬೇಕಾಗಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

ಆದೇಶ.

ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

ಮಿತ್ತಬಾಗಿಲು ಗ್ರಾಮದ MR: 274/80-81 ನ್ನು ರದ್ದುಪಡಿಸಿ ಆದೇಶಿಸಿದೆ. ಭು ನ್ಯಾಯ ಮಂಡಳಿ LRY: 79/74-75 ನೇ ಪ್ರಕರಣವನ್ನು ಪರಿಶೀಲಿಸಿ ಮೇಲ್ಮನವಿದಾರರಿಗೆ ಸ.ನಂ. 75/15ಎ ಪೈಕಿ ಫಾರ್ಮ್ - 10 ರಲ್ಲಿ ದಾಖಲಾಗಿರುವ ಜಮೀನಿನ ವಿಸ್ತೀರ್ಣ 0.93 ಎಕ್ರೆ ಎಂಬುವುದನ್ನು ನಿಯಮಾನುಸಾರ ಪರಿಶೀಲಿಸಿ ಖಚಿತಪಡಿಸಿಕೊಂಡು ಅದರಂತೆ ಮೃತ ಖಾತೆದಾರರ ಎಲ್ಲಾ ವಾರಸುದಾರರ ಹೆಸರಿಗೆ ಪಹಣಿ ದಾಖಲಿಸುವರೇ ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ:2[illegible]-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಶಿವಯ್ಯ ಎಸ್.ಎಲ್ .ಇವರ ಮುಖಾಂತರ ಜ್ಯಾರಿ.

ಪ್ರತಿ: 2ನೇ ಪ್ರತಿವಾದಿಯವರಿಗೆ ಅಂಚೆ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗ